ಶ್ರೀ ಎಂ.ಪಿ. ಪ್ರಕಾಶ್ : ಆಗಿರಬಹುದು. ಅದು ಏನಾಗಿದೆ? ಯಾವ ಮಟ್ಟದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ, ತಮ್ಮ ಆಕ್ಷೇಪಣೆಗಳನ್ನು ತೆಗೆದುಕೊಂಡು ಮಾಡುತ್ತಾರೆ. ಇದರಲ್ಲ ಏನೂ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನವಲಗುಂದ ಶಾಸಕರು ಇಲ್ಲೇ ಇದ್ದಾರೆ. ಅವರನ್ನು ಬೇಕಾದರೆ ಕೇಳಬಹುದು. ಆ ವಿಷಯದಲ್ಲಿ ನಾವು ಯಾರೂ ಭಾಗವಹಿಸಲಿಕ್ಕೆ ಹೋಗಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ವರ್ಕ್ ಲೋಡ್ ಹಂಚಿಕೆಯಾಗಬೇಕನ್ನುವ ಉದ್ದೇಶದಿಂದ ಪರಿಶೀಲನೆ ಮಾಡಲಾಯಿತು. ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗಬೇಕು. ಡಿಸ್ಟೆನ್ಸ್ ನೋಡಿಕೊಂಡು, ಆದಷ್ಟು ಮಟ್ಟಿಗೆ ಪಾಪ್ಯುಲೇಷನ್ ನೋಡಿಕೊಂಡು ಮಾಡಬೇಕು. ಪುನಃ ಅಸಮತೋಲನ ಇಟ್ಟು ಒಂದುಕಡೆ 12 ತಾಲ್ಲೂಕು, ಇನ್ನೊಂದು ಕಡೆ 6 ತಾಲ್ಲೂಕು ಮಾಡುವುದು ಸರಿಯಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಶಿಗ್ಗಾವಿಯನ್ನು ಹಾವೇರಿ ಜಿಲ್ಲೆಗೆ ಸೇರಿಸಿರುವುದರಿಂದ ಸರ್ಕಾರಕ್ಕೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಶ್ರೀ ಪುಟ್ಟಣ್ಣಯ್ಯನವರೇ ಆ ಮದುವೆ ಗಲಾಟೆ ವಿಷಯವನ್ನು ಪ್ರಸ್ತಾಪ ಮಾಡಿ.

ಮಂಡ್ಯ ಜಿಲ್ಲೆಯ ಬೊಪ್ಪಸಮುದ್ರ ಗ್ರಾಮದ ಕುಳ್ಳೇಗೌಡರ ಮಗ ಪುಟ್ಟೇಗೌಡ ಅನಿತಾ ಎಂದ ಹುಡುಗಿಯನ್ನು ಪ್ರೀತಿಸಿ ಮದುವೆಯಾಗದೇ ಇರುವುದು.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಬೊಪ್ಪಸಮುದ್ರ ಗ್ರಾಮದಲ್ಲಿ ಕುಳ್ಳೇಗೌಡರ ಮಗ ಪುಟ್ಟೇಗೌಡ ಎನ್ನುವವನು ಅವರ ಸಂಬಂಧಿಕರಲ್ಲೇ ಇದ್ದ ಅನಿತಾ ಎನ್ನುವ ಹುಡುಗಿಯನ್ನು ಒಂದೂವರೆ ವರ್ಷದಿಂದ ಪ್ರೀತಿಸುತ್ತಿದ್ದು, ಆ ಹುಡುಗಿ ಎಂಟೂವರೆ ತಿಂಗಳು ಗರ್ಭವತಿಯಾಗಿದ್ದಳು. ಇವರ ಮದುವೆಯನ್ನು ಈಗ ಮಾಡಿದ್ದೇ ಆದಲ್ಲಿ ಇನ್ನು 20 ದಿವಸಗಳಲ್ಲೇ ಮಗುವಾದರೆ, ನಮ್ಮ ಮನೆತನಕ್ಕೆ ಅವಮಾನವಾಗುತ್ತದೆಂದು, ಈಗ ನೀನು ಗರ್ಭಪಾತ ಮಾಡಿಸಿಕೊಂಡರೆ, ನಂತರ ನಿನ್ನನ್ನೇ ನನ್ನ ಮಗನಿಗೆ ಮದುವೆ ಮಾಡಿಕೊಳ್ಳುತ್ತೇವೆಂದು ಹುಡುಗನ ಮನೆಯವರು ಮತ್ತು ಐದಾರು ಜನ ಅವರ ಸಂಬಂಧಿಕರು ಹೇಳಿ, ಆಕೆಗೆ ಗರ್ಭಪಾತವನ್ನು ಮಾಡಿಸಿ ಈಗ ಕೈಬಿಟ್ಟಿದ್ದಾರೆ. ಅದಕ್ಕಾಗಿ ಆಕೆ, ಒಂದು ವಾರದಿಂದ ಅವರ ಮನೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾಳೆ. ಒಂದು ವಾರದಿಂದ ಉಪವಾಸ ಮಾಡುತ್ತಿದ್ದರೂ ಅವರ ಮನೆಯವರು ಏನೂ ಪ್ರತಿಕ್ರಿಯೇ ವ್ಯಕ್ತಪಡಿಸಿಲ್ಲ. ಈಗ ಇದರ ಬಗ್ಗೆ ಮಹಿಳಾ ಸಂಘಟನೆಯವರು ಗಮನಹರಿಸಿ, ನೀನು ಬದುಕಲಿಕ್ಕಾಗಿ ಹೋರಾಟ ಮಾಡುತ್ತಿರುವುದರಿಂದ ಊಟ ಮಾಡಬೇಕೆಂದು ಹೇಳಿ ಜ್ಯೂಸ್ ಕುಡಿಸಿ, ತಿಂಡಿಯನ್ನು ತಿನ್ನಿಸಿ ಅವರ ಜಗಲಿ ಮೇಲೆ ಕೂರಿಸಿದ್ದಾರೆ. ಈ ಬೊಪ್ಪಸಮುದ್ರ ಗ್ರಾಮವು ಮಾನ್ಯ ನಾಗೇಗೌಡರ ಕ್ಷೇತ್ರದಲ್ಲಿ ಬರುತ್ತದೆ. ಮಾನ್ಯ ನಾಗೇಗೌಡರ ಕ್ಷೇತ್ರದಿಂದ ಇಂಥ ಕೆಲಸ ಮಾಡಿದ ಪುಟ್ಟೇಗೌಡ ಈಗ ಮಾಯ ಆಗಿದ್ದಾನೆ. ಮಾಯ ಅವನು ಆಗಿಲ್ಲ, ಅದನ್ನು ಅವರ ಮನೆಯವರೆಲ್ಲಾ

ಸೇರಿ ಮಾಡಿದ್ದಾರೆ. ಆಕೆಗೆ, ಒಂದು ಎಕರೆ ಗದ್ದೆ ಕೊಡುತ್ತೇವೆ, ಒಂದು ಲಕ್ಷ ರೂಪಾಯಿ ಕೊಡುತ್ತೇವೆ, ನನ್ನ ಮಗನನ್ನು ಮರೆತು ಬಿಡು ಎಂದು ಹೇಳಿದ್ದಾರೆ. ಏಕೆ ಆ ಮಾತನ್ನು ಹೇಳಿದ್ದಾರೆಂದರೆ, ಇವರಿಗಿಂತ ಅವರು ಆರ್ಥಿಕವಾಗಿ ಕಡಿಮೆ ಇರುವುದರಿಂದ ಹೇಳಿದ್ದಾರೆ. ಅದೇ ಶ್ರೀಮಂತರಾಗಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಅವರು ಏನೋ ದೊಡ್ಡ ಶ್ರೀಮಂತರು ಎನ್ನುವ ಭಾವನೆಯಿಂದ ಈ ಕೆಲಸ ಮಾಡಿದ್ದಾರೆ. ಪೋಲೀಸರಿಗೆ ಮತ್ತು ಸಂಬಂಧಪಟ್ಟ ಆಡಳಿತ ವ್ಯವಸ್ಥೆಗೆ ಈ ವಿಷಯ ಗೊತ್ತಿದ್ದರೂ ಆ ಮಹಿಳೆಗೆ ಇಷ್ಟೊಂದು ಅನಾನುಕೂಲವಾಗಿ ಹೋರಾಟ ಮಾಡುತ್ತಿದ್ದರೂ ಮಧ್ಯೆ ಪ್ರವೇಶ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಪ್ರತಿ ದಿನ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವ ವಿಷಯ ನಾವು ಕಾಣುತ್ತಿದ್ದೇವೆ. ಒಬ್ಬ ಸಬ್ ಇನ್ಸಪೆಕ್ಟರ್ ಏನು ಮಾಡಿದ ಎಂದು ನಿನ್ನೆ ದಿವಸ ಸದನದಲ್ಲಿ ಚರ್ಚೆ ಕೂಡ ಆಯಿತು. ನಿನ್ನೆ ದಿವಸದ ಪೇಪರ್‌ನಲ್ಲಿ ಒಬ್ಬ ದಫೇದಾರ ವರದಕ್ಷಿಣೆಗಾಗಿ ಒಬ್ಬ ಮಹಿಳೆಯನ್ನು ಕೊಲೆ ಮಾಡಿರುವ ವಿಚಾರ ಬಂದಿತ್ತು. ಮಹಿಳೆಯರಿಗೆ 33 ಪರ್‌ಸೆಂಟ್ ರಿಸರ್ವೇಷನ್ ಕೊಡಬೇಕೆಂದು ಏನು ಹೇಳಲಾಗುತ್ತಿದೆಯೋ ಅದೇ 33 ಪರ್‌ಸೆಂಟ್‌ನಷ್ಟು ಈ ಕೆಲಸವೂ ನಡೆಯುತ್ತಿದೆ. ಆದ್ದರಿಂದ, ಮಹಿಳಾ ಶಾಸಕಿಯವರು ಈ ಬಗ್ಗೆ ಒಕ್ಕೊರಲಿನಿಂದ ಕೂಗಬೇಕು ಮತ್ತು ಹೋರಾಟ ಮಾಡಬೇಕು. ನಾಳೆ ದಿವಸ ಬೆಳಿಗ್ಗೆ ಈ ಸದನದ ಕೆಲಸಕ್ಕಿಂತ ಮುಖ್ಯವಾಗಿ ಆ ಮಹಿಳೆಗೆ ನ್ಯಾಯ ದೊರಕಿಸಿಕೊಡಬೇಕು, ಯಾವ ಪುರುಷ ಅವಳಿಗೆ ಅನ್ಯಾಯ ಮಾಡಿದ್ದಾನೋ ಅದನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ಈ ರೀತಿ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಮೊದಲು ಆ ಪುಟ್ಟೇಗೌಡ ಎಲ್ಲಿದ್ದಾನೋ ಅವನನ್ನು ಅವರು ಹಿಡಿದುಕೊಂಡು ಬರಬೇಕು. ಮತ್ತು ನಮ್ಮ ಜೊತೆಗೆ ಎಲ್ಲಾ ಶಾಸಕ ಮಿತ್ರರುಗಳೂ ಬರಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಕಂಪ್ಲೇಂಟ್ ಕೊಟ್ಟಿದ್ದರೂ ಪೋಲೀಸಿನವರು ಪುಟ್ಟೇಗೌಡನನ್ನು ಹುಡುಕಲಿಕ್ಕೆ ಪ್ರಯತ್ನ ಪಟ್ಟಿಲ್ಲ ಎನ್ನುವುದೇ ಇದರಲ್ಲಿನ ಮುಖ್ಯ ಅಪವಾದ. ಪೋಲೀಸಿನವರೇ ಹುಡಕಲಿಕ್ಕಾಗಲಿಲ್ಲವೆಂದರೆ, ಪುಟ್ಟಣ್ಣ ಎಲ್ಲಿಂದ ಹುಡುಕಿಕೊಂಡು ಬರಲಿಕ್ಕೆ ಸಾಧ್ಯ? ಕಂಪ್ಲೇಂಟ್ ಕೊಟ್ಟಿದ್ದರೂ ಕೂಡ ಪೋಲೀಸಿನವರು ಇದರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿಸಿ ಅವನನ್ನು ಹುಡುಕತಕ್ಕಂಥ ಪ್ರಯತ್ನ ಮಾಡಿಲ್ಲ. ವಂಚನೆ ಪ್ರಕರಣದಡಿ ಈ ಕೇಸ್ ರಿಜಿಸ್ಟರ್ ಮಾಡಿಕೊಂಡು, ಕಂಪ್ಲೇಂಟ್ ಕೊಟ್ಟಿದ್ದರೂ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಪೋಲೀಸರ ಮೇಲೂ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮನೆಯವರ ಮೇಲೆ ಕ್ರಮ ತೆಗೆದುಕೊಂಡರೆ ಪುಟ್ಟೇಗೌಡ ತಕ್ಷಣ ಸಿಗುತ್ತಾನೆ. ಆ ಹುಡುಗಿಗೆ ತಮ್ಮ ಮಗನಿಂದ ಬಾಳು ಕೊಡಬಾರದೆಂದು ಅವರ ಮನೆಯವರೇ ಪುಟ್ಟೇಗೌಡನನ್ನು ಬಚ್ಚಿಟ್ಟು ಈ ಕೆಲಸವನ್ನು ಮಾಡಿದ್ದಾರೆ. ಆ ಗ್ರಾಮದ ಕೆಲವು ಯಜಮಾನರುಗಳು, ಆ ಹುಡುಗಿಗೆ ಬೇರೆ ರೀತಿಯಲ್ಲಿ ಬಾಳುಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಪುಟ್ಟೇಗೌಡ ಇಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಗಂಭೀರವಾದ ಸಮಸ್ಯೆಯಾದ ಕಾರಣ ಸರಕಾರವು ತತ್‌ಕ್ಷಣ ಆಕೆಗೆ ನ್ಯಾಯವನ್ನು ದೊರಕಿಸಿ ಕೊಡಬೇಕು.

ಅಧ್ಯಕ್ಷರು : ರೋಷನ್‌ಬೇಗ್‌ರವರೇ, ಮಾನ್ಯ ಸದಸ್ಯರ ಕಂಪ್ಲೇಂಟ್ ಇಷ್ಟೆ. ಅವರೆಲ್ಲರೂ ಹತ್ತಿರದ ಸಂಬಂಧಿಕರು ಮತ್ತು ಒಂದೇ ಸಮಾಜಕ್ಕೆ ಸೇರಿದವರು. ಇವರು ಬಡವರು ಎಂಬ ಕಾರಣಕ್ಕಾಗಿ ಆ ಹುಣ್ಣಿಮೆಗಳನ್ನು ಒಂದು ಕಾಲದಲ್ಲಿ ಸಮೀಪ ಇದ್ದರೂ ಕೂಡ ಈಗ ಲಗ್ನ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಾ ಇಲ್ಲ. ಅವನು ಮಿಸ್ಸಿಂಗ್ ಎಂದು ಕೂಡ ಹೇಳುತ್ತಿದಾರೆ. ನಿಮ್ಮ ಆಫೀಸರ್ಸ್‌ಗೆ ಕರೆಸಿ ಮಾತನಾಡಿ ಸ್ವಲ್ಪ ಜಬರ್‌ದಸ್ತಿ ಮಾಡಿ ಅವರ ಮನೆಯವರೆಲ್ಲರನ್ನೂ ಕರೆಸಿಕೊಂಡು ಕೂಡಿಸಿಕೊಂಡು ಮಾತನಾಡಿದಿರೆ ಎಲ್ಲಾ ಸೆಟ್ಲ್ ಆಗುತ್ತದೆ. ಏನೂ ತೊಂದರೆಯಾಗುವುದಿಲ್ಲ.

ಶ್ರೀ ರೋಷನ್ ಬೇಗ್ (ಗೃಹಸಚಿವರು) : ಮಾನ್ಯ ಅಧ್ಯಕ್ಷರೇ, ನಾಳೆ ಹೌಸ್‌ಮೀಟ್ ಮಾಡುವುದರೊಳಗೆ ಈ ಬಗ್ಗೆ ಒಂದು ಸುದ್ದಿಯನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಶ್ರೀರಾಮರೆಡ್ಡಿಯವರು, ಜಯಚಂದ್ರರವರು, ಮುನಿಯಪ್ಪನವರು, ಇವರೆಲ್ಲರೂ ಸೇರಿ ಟೊಮೇಟೋ ವಿಷಯವನ್ನು ಹೇಳಿದ್ದಾರೆ. ಈಗ ಚರ್ಚೆಯನ್ನು ಯಾರಾದರೂ ಒಬ್ಬರು ಪ್ರಾರಂಭ ಮಾಡಬೇಕು. ಮೊದಲನೇ ಬೆಂಚ್‌ನಲ್ಲಿದ್ದವರಿಗೆ ಅವಕಾಶವು ಸಿಗುತ್ತಾ ಇರುತ್ತದೆ. ಆದ್ದರಿಂದ ಅಪರೂಪಕ್ಕೆ ಮುನಿಯಪ್ಪನವರು ಮಾತನಾಡಲಿ.

ಕೋಲಾರ ಜಿಲ್ಲೆಯಲ್ಲಿ ಟೊಮೇಟೋ ಬೆಳೆಗಾರ ಧಾರುಣ ಪರಿಸ್ಥಿತಿ

+ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿನ ಟೊಮೇಟೋ ಬೆಳೆಗಾರರ ಒಂದು ಧಾರುಣ ಸ್ಥಿತಿಯನ್ನು ಕುರಿತು ಪತ್ರಿಕೆಗಳಲ್ಲಿ ಬಂದಿರುವುದನ್ನು ಈಗಾಗಲೇ ನೋಡಿದ್ದೀರಿ. ಮೇಲ್ಮನೆಯಲ್ಲಿ ಕೂಡ ಇದರ ಬಗ್ಗೆ ಪ್ರಸ್ತಾಪವಾಗಿದೆ. ಚಿಂತಾಮಣಿಯಲ್ಲಿ ನಡೆದ ಘಟನೆ ಮತ್ತು ತದನಂತರ ಕಳೆದ ಶನಿವಾರ ಕೋಲಾರದಲ್ಲಿ ರೈತರು ಟೊಮೇಟೋವನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದಾಗ, ಮಾರುಕಟ್ಟೆಯನ್ನು ಹೇಳುವವರು ಕೇಳುವವರು ಇಲ್ಲದೆ ಅನಾಥರಾಗಿ ಕಡೆಗೆ ರೊಚ್ಚಿಗೆದ್ದು ರೈತರು ಅನಿವಾರ್ಯವಾಗಿ ತಂದು ಹೆದ್ದಾರಿಗೆ ನೂರಾರು ಟನ್‌ಗಳಷ್ಟು ಟೊಮೇಟೊವನ್ನು ಸುರಿದಿದ್ದನ್ನು ಪತ್ರಿಕೆಗಳಲ್ಲಿ ಎಲ್ಲರೂ ಓದಿದ್ದಾರೆ. ಕೋಲಾರ ಜಿಲ್ಲೆಯ ಸಂಪೂರ್ಣವಾದಂಥ ನೈಜಚಿತ್ರವು ತಮ್ಮ ಅನುಭವದಲ್ಲಿದೆ. ತಾವುಗಳು ಆ ಜಿಲ್ಲೆಯಲ್ಲಿ ಇಂಥ ಸಮಸ್ಯೆಗಳನ್ನು ಖುದ್ದಾಗಿ ಅನುಭವಿಸತಕ್ಕಂಥವರು. ಬಹುಶಃ 400-500 ಅಡಿಗಳಷ್ಟು ಅಂತರ್ಜಲವನ್ನು ರೈತರು ಹೊರತೆಗೆದು, ಕೇವಲ ದಿನದಲ್ಲಿ 6 ಗಂಟೆಗಳ ಕಾಲ ನಮಗೆ ಸಿಗತಕ್ಕಂಥ ವಿದ್ಯುತ್‌ನ್ನು ಉಪಯೋಗಿಸಿ, ನೂರಾರು ಟನ್‌ಗಳಷ್ಟು ಟೊಮೇಟೊವನ್ನು ಬೆಳೆದು ಅದಕ್ಕೆ ಬೆಲೆ ಬರಲಿಲ್ಲ ಎಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಒಂದು ಧಾರುಣವಾದಂಥ ಪರಿಸ್ಥಿತಿಯಲ್ಲಿ ಇದುವರೆಗೆ ರಾಜ್ಯದಲ್ಲಿ ನಮ್ಮ ರೈತರು ಬಂದಿಲ್ಲ ಎಂದು ಕಾಣುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರವು ಎಷ್ಟರಮಟ್ಟಿಗೆ ಸ್ಪಂಧಿಸಿದೆ? ರೈತರ ಬಗ್ಗೆ ಎಷ್ಟು ಕಳಕಳಿಯನ್ನು ಹೊಂದಿದೆ? ಎನ್ನತಕ್ಕಂಥ ವಿಚಾರವನ್ನು ನಾವು ಯೋಚನೆ ಮಾಡಿ ನೋಡಿದರೆ, ಬಹುಶಃ ರೈತರ ಬಗ್ಗೆ ಎಳ್ಳಷ್ಟೂ ಕಾಳಜಿಯನ್ನು ಇವರು ವಹಿಸಿಲ್ಲ ಎಂದು ಹೇಳಬೇಕಾಗುತ್ತದೆ. ಎಪಿಎಂಸಿ ಯವರನ್ನು ಕರೆದು ಕನಿಷ್ಟಪಕ್ಷ ಹೊರರಾಜ್ಯಗಳಲ್ಲಿ ಎಲ್ಲೆಲ್ಲಿ ಇದಕ್ಕೆ ಮಾರುಕಟ್ಟೆ ಇದೆ